ದಿನಾಂಕ 02-07-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ನಿಪಿ-16 ರಿಂದ ನಿಪಿ-19 ರ ಸಂಬಂಧ ಪ್ರತಿವಾದಿಗಳ ಪರ ಶ್ರೀ ಬಿ.ಪಿ.ಆರ್., ವಕೀಲರಿಂದಃ-

12. ನಿಪಿ-16 ರಿಂದ ನಿಪಿ-19 ದಾಖಲೆಗಳನ್ನು ಹೊರತುಪಡಿಸಿ ಅವುಗಳಲ್ಲಿ ನಮೂದಿಸಿರುವ ಹಣ ನನಗೆ ಬರಬೇಕೆಂದು ತೋರಿಸಲು ಬೇರೆ ದಾಖಲೆ ಹಾಜರುಪಡಿಸಿಲ್ಲ. ಪ್ರತಿವಾದಿಯವರು ಲಿಖಿತ ಹೇಳಿಕೆಯಲ್ಲಿ ಹಾಗೂ ಅವರ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ನಿಪಿ-16 ಮತ್ತು ನಿಪಿ-17 ದಾಖಲೆಗಳ ಬಗ್ಗೆ ಹೇಳಿದ್ದಾರೆ ಎಂದರೆ ಸರಿಯಲ್ಲ. ನಿಪಿ-16 ಮತ್ತು ನಿಪಿ-17 ದಾಖಲೆಗಳನ್ನು ನನ್ನ ಮುಖ್ಯವಿಚಾರಣೆ ಕಾಲಕ್ಕೆ ಹಾಜರುಪಡಿಸಿಲ್ಲ. ನನ್ನ ಪಾಟೀ ಸವಾಲು ಆದ ನಂತರದಲ್ಲಿ ನಿಪಿ-16 ರಿಂದ ನಿಪಿ-19 ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿ. ನಿಪಿ-16 ಮತ್ತು ನಿಪಿ-17 ಚೆಕ್‌ಗಳನ್ನು ಪ್ರತಿವಾದಿಗಳಿಗೆ ಮೊದಲೇ ನೀವು ವಾಪಸ್ ಕೊಡಬೇಕಿತ್ತು, ನಿಮ್ಮನ್ನು ಪಾಟೀ ಸವಾಲು ಮಾಡಿದ ನಂತರದಲ್ಲಿ ನಿಪಿ-16 ಮತ್ತು ನಿಪಿ-17 ಚೆಕ್‌ಗಳನ್ನು ಹಾಜರುಪಡಿಸಿ ಹಣ ಬರಬೇಕೆಂದು ಕೇಳುತ್ತಿದ್ದೀರಿ ಎಂದರೆ ಸಾಕ್ಷಿಯು ಜೆರಾಕ್ಸ್ ಕೊಟ್ಟಿದ್ದೆ ಎಂದು ನುಡಿಯುತ್ತಾರೆ. ಚೆಕ್‌ಗಳನ್ನು ನೀವು ಪ್ರತಿವಾದಿಗಳಿಗೆ ಕೊಡಬೇಕಿತ್ತು ಎಂದರೆ ಸಾಕ್ಷಿಯು ಅವರಿಗೆ ನಾನು ಯಾಕೆ ಕೊಡಬೇಕು ಎಂದು ನುಡಿಯುತ್ತಾರೆ.

13. ನಿಪಿ-16 ಮತ್ತು ನಿಪಿ-17 ರಲ್ಲಿ ನಮೂದಿಸಿರುವ ಹಣವನ್ನು ಕೊಡದಿದ್ದಲ್ಲಿ ನಿಮ್ಮ ವಿರುದ್ಧ ಚೆಕ್ ಬೌನ್ಸ್ ಕೇಸು ಹಾಕುತ್ತೇನೆ ಎಂದು ಪ್ರತಿವಾದಿಗಳಿಗೆ ನಿಪಿ-6 ರಂತೆ ವಕೀಲರ ಮುಖಾಂತರ ನೋಟಿಸ್

ಕೊಟ್ಟಿದ್ದೆ ಎಂದರೆ ಸರಿ. ಪ್ರತಿವಾದಿಗಳ ವಿರುದ್ಧ ಚೆಕ್ ಬೌನ್ಸ್ ಪ್ರಕರಣ ಸಲ್ಲಿಸಿಲ್ಲ. ನಿಪಿ-16 ಮತ್ತು ನಿಪಿ-17 ದಿನಾಂಕ 21.03.2017 ರಂದು ಬೌನ್ಸ್ ಆದ ನಂತರದಲ್ಲಿ ದಿನಾಂಕ 10.10.2017 ರವರೆಗೆ ಯಾಕೆ ಚೆಕ್‌ಗಳನ್ನು ಇಟ್ಟುಕೊಂಡಿದ್ದೀರಿ ಎಂದರೆ ಸಾಕ್ಷಿಯು ಅವುಗಳನ್ನು ಎಲ್ಲಿ ತೆಗೆದುಕೊಂಡು ಹೋಗಿ ಕೊಡಲಿ, ಅವರಿಗೆ ವಾಪಸ್ ಕೊಡಲಾ ಎಂದು ನುಡಿಯುತ್ತಾರೆ. ಸಮ್ಮತಿ ಪತ್ರದಲ್ಲಿ ಬರೆದಿರುವ ಹಣ ನಿಮಗೆ ಬಂದಿತ್ತು, ಆದ್ದರಿಂದಲೇ ಚೆಕ್‌ಗಳನ್ನು ಪ್ರತಿವಾದಿಗಳಿಗೆ ವಾಪಸ್ ಕೊಡಬೇಕಿತ್ತು, ವಾಪಸ್ ಕೊಡದೇ ಪ್ರತಿವಾದಿಗಳಿಗೆ ತೊಂದರೆ ಕೊಡಬೇಕೆಂದು ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿಯು ನನಗೆ ಹಣ ಬಂದಿಲ್ಲ ಎಂದು ನುಡಿಯುತ್ತಾರೆ. ದಾವೆಯಲ್ಲಿ ಹೇಳಿರುವ ಹಣ ನನಗೆ ಈಗಾಗಲೇ ಬಂದಿದೆ, ಹೆಚ್ಚಿಗೆ ಹಣ ಪಡೆಯಬೇಕೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳು ಪಾವತಿಸಿರುವ ಹಣವನ್ನು ಸೇರಿಸಿ ಕ್ಲೇಮು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.